ಪಿಡಬ್ಲ್ಯೂ: 1 ಓ.ಎಸ್.ನಂ.392/2014

ದಿನಾಂಕ 28-09-2020 ರಂದು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಎಸ್ ಓ ಪಿ ರೀತ್ಯಾ ಆದ ದೇಶದಂತೆ ವಿಚಾರಣೆ ತೆಗೆದುಕೊಳ್ಳಲಾಯಿತು.

ದಿನಾಂಕಃ 17-12-2020 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀಸವಾಲುಃಃಃ ಪ್ರತಿವಾದಿ ಪರ ವಕೀಲರಾದ ಶ್ರೀ. ವಿ ವಿ ಆರ್ ವಕೀಲರಿಂದಃ

ನನಗೆ ಮದುವೆಯಾಗಿ 30 ವರ್ಷ ಆಗಿದೆ ಎಂದರೆ ಸರಿ. ನಾನು ದಾವಾ ಹಾಕುವಾಗ ನನ್ನ ವಕೀಲರಿಗೆ ಕೊಟ್ಟಿರುವ ವಿಳಾಸದಲ್ಲಿಯೇ ನಾನು 30 ವರ್ಷಗಳಿಂದ ವಾಸ ಇರುತ್ತೇನೆ. ಈ ದಾವೆಯನ್ನು 18 ಆಸ್ತಿಗಳ ಮೇಲೆ ಹಾಕಿರುತ್ತೇನೆ. 12 ಜನರ ಮೇಲೆ ದಾವೆಯನ್ನು ಹಾಕಿರುತ್ತೇನೆ. ಸರ್ವೆ ನಂಬರ್ ಜ್ಞಾಪಕವಿಲ್ಲ. ನನ್ನ ಸಂಬಂಧಿಕರ ಮೇಲೆ ದಾವಾ ಹಾಕಿರುತ್ತೇನೆ ಮತ್ತು ಮಾರುತ್ತಿದ್ದವರ ಮೇಲೆ ದಾವ ಹಾಕಿರುತ್ತೇನೆ. 25 ವರ್ಷದ ಹಿಂದೆ ಮಾರಾಟ ಮಾಡುತ್ತಿದ್ದರು ಆ ಕಾರಣದಿಂದ ದಾವೆ ಹಾಕಿರುತ್ತೇನೆ. ಹನುಮಂತಪ್ಪ ಯರ್ರಪ್ಪ, ಚೆನ್ನಮ್ಮ, ಸಂಪಂಗಿ ರಾಮಯ್ಯ, ಮತ್ತು ಮಾರುತ್ತಿರುವವರ ಮೇಲೆ ದಾವೆ ಹಾಕಿರುತ್ತೇನೆ. ಚೆನ್ನಮ್ಮನನ್ನು ಈ ದಾವಾದಲ್ಲಿ ಸೇರಿಸಿರುತ್ತೇನೆ. ನಾನು ಈ ಮೇಲೆ ಹೇಳಿದವರು 25 ವರ್ಷಗಳ ಹಿಂದೆ ಮಾರಾಟ ಮಾಡುತ್ತಿದ್ದರು ಎಂದರೆ ಸರಿ. ಈ ಕಾರಣದಿಂದ ನಾನು ಈ ದಾವಾ ಹಾಕಿರುತ್ತೇನೆ ಎಂದರೆ ಸರಿ.

ನನ್ನ ತಂದೆ ಹೆಸರು ದೊಡ್ಡ ರಾಮಪ್ಪ ಬೇರೆ ಯಾವ ಹೆಸರಿನಿಂದ ಕರೆಯುವುದಿಲ್ಲ. ಸಾಕ್ಷಿಯು ಮುಂದುವರಿದು ದೊಡ್ಡ ರಾಮಪ್ಪನೋ ದೊಡ್ಡ ರಾಮಯ್ಯನೋ ಇದೆ ಎಂದು ನುಡಿಯುತ್ತಾರೆ. ನಾನು ಕೇಸಿನ ದಾಖಲಾತಿಗಳನ್ನು

ಚಿಂತಾಮಣಿ ತಾಲ್ಲೂಕು ಕಛೇರಿಯಲ್ಲಿ ಪಡೆದಿರುತ್ತೇನೆ. ನನಗೆ ಸರ್ವೆ ನಂಬರ್ ನೆನಪಿರುವುದಿಲ್ಲ ಈ ಬಗ್ಗೆ ವಕೀಲರು ಹೇಳಿರುತ್ತಾರೆ. ನಾನೇ ಹುಡುಕಿ ತೆಗೆದುಕೊಂಡಿರುತ್ತೇನೆ. ನಾನು ಮದುವೆಯಾದ 30 ವರ್ಷಗಳಿಂದ ನನು ಊರಿಗೆ ಹೋಗಿಲ್ಲ. ನನ್ನನ್ನು ಯಾರೂ ನೋಡುವುರು ಇಲ್ಲ ಹಾಗಾಗಿ ಊರಿಗೆ ಹೋಗಿಲ್ಲ. 17 ಸ್ವತ್ತುಗಳು ಕೊಂಗನಹಳ್ಳಿ, ಕಟಮಾಚನಹಳ್ಳಿ, ಮುನಗನಹಳ್ಳಿ ಪಂಚಾಯಿತ್ತಿಗೆ ಸೇರಿವೆ.

ಈ ದಾವೆ ಬಿಟ್ಟು ನಾನು ಹಾಕಿಲ್ಲ ನನ್ನ ವಿರುದ್ದ ಯಾರೂ ಹಾಕಿಲ್ಲ. ಸಾಕ್ಷಿ ಮುಂದುವರಿದು ಕ್ರಿಮಿನಲ್ ಕೇಸು ಹಾಕಿದ್ದರು ಸಿವಿಲ್ ಕೇಸು ಹಾಕಿಲ್ಲ ಎಂದು ನುಡಿಯುತ್ತಾರೆ. ಸಂಪಂಗಿ ರಾಮಯ್ಯ, ಕೃಷ್ಣಪ್ಪ, ಶ್ರೀನಿವಾಸಪ್ಪ 2008 ರಲ್ಲಿ ನನ್ನ ವಿರುದ್ದ ಒಂದು ಸಿವಿಲ್ ದಾವಾ ಹಾಕಿದ್ದರು ನಾನು ನನ್ನ ವಾದ ಪತ್ರದಲ್ಲಿ ಹೇಳಿರುತ್ತೇನೆ ಎಂದರೆ ಗೊತ್ತಿಲ್ಲ. ಸಾಕ್ಷಿಯು ಮುಂದುವರಿದು ನನ್ನ ಮೇಲೆ ಹಾಕಿದ್ದರು ಸತ್ಯ ಎನ್ನುತ್ತಾರೆ. ಮತ್ತೆ ಪುನಃ ಹಾಕಿರುವುದು ಗೊತ್ತಿಲ್ಲ ಎಂದು ನುಡಿಯುತ್ತಾರೆ. 2008 ರಲ್ಲಿ ಸಲ್ಲಿಸಿದ ದಾವಾ ಸಮನ್ಸ್ ನನಗೆ ಬಂದಿತ್ತು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ

(ಶ್ರೀ.ಶಿವಕುಮಾರ ಜಿ.ಜೆ)
ಸಿ/ಸಿ ಅಪರ ಸಿ.ನ್ಯಾ. ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.